# ಕರ್ನಾಟಕ ನಿಕ್ಷೇಪ ನಿಧಿ ಅಧಿನಿಯಮ, 1962

(ಕರ್ನಾಟಕ ರಾಜ್ಯಪತ್ರ, ಗುರುವಾರ, ಮೇ 4, 2006, ಭಾಗ – IVಎ, ಪುಟ 625 ರಿಂದ 635ರ ವರೆಗೆ ಪ್ರಕಟಿಸಲಾಗಿದೆ.)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


**ಅಧ್ಯಾಯ– I**

**ಪ್ರಾರಂಭಿಕ**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು

**ಅಧ್ಯಾಯ– II**

**ನಿಕ್ಷೇಪದ ಬಗ್ಗೆ ನೋಟೀಸು, ವಿಚಾರಣೆ ಮತ್ತು ಘೋಷಣೆ**

3. ನಿಕ್ಷೇಪ ಕಂಡುಬಂದ ಬಗ್ಗೆ ಡೆಪ್ಯೂಟಿ ಕಮಿಷನರನಿಗೆ ನೋಟೀಸು
4. ಜಿಲ್ಲಾಧಿಕಾರಿಯಿಂದ ಅಧಿಸೂಚನೆ
5. ನಿಕ್ಷೇಪದ ಹಕ್ಕಿನ ಮುಟ್ಟುಗೋಲು
6. ಡೆಪ್ಯೂಟಿ ಕಮಿಷನರ್‌ನಿಂದ ವಿಚಾರಣೆ
7. ಕೆಲವು ಸಂದರ್ಭಗಳಲ್ಲಿ ನಿಕ್ಷೇಪವನ್ನು ಕ್ಲೇಮು ಮಾಡುವ ವ್ಯಕ್ತಿಯಿಂದ ದಾವೆ
8. ಕೆಲವು ಸಂದರ್ಭಗಳಲ್ಲಿ ನಿಕ್ಷೇಪವು ಒಡೆಯನಿಲ್ಲದ್ದು ಎಂದು ಘೋಷಿಸುವುದು.

**ಅಧ್ಯಾಯ– III**

**ಒಡೆಯನಿಲ್ಲದ್ದು ಎಂದು ಘೋಷಿಸಲಾದ ನಿಕ್ಷೇಪದ ವಿಲೇವಾರಿ**

9. ಘೋಷಣೆಯ ತರುವಾಯದ ವ್ಯವಹರಣೆಗಳು
10. ಯಾರೇ ವ್ಯಕ್ತಿಯು ಸ್ಥಳದ ಒಡೆಯನೆಂದು ಕ್ಲೇಮು ಮಾಡದಿದ್ದರೆ ನಿಕ್ಷೇಪವನ್ನು ಕಂಡವನಿಗೆ ನೀಡುವುದು
11. ಅಂಥ ಒಬ್ಬನೇ ವ್ಯಕ್ತಿಯು ಕ್ಲೇಮು ಮಾಡಿದಾಗ ಮತ್ತು ಅವನ ಕ್ಲೇಮಿನ ಬಗ್ಗೆ ವಿವಾದವಿಲ್ಲದಿದ್ದಾಗ, ನಿಕ್ಷೇಪವನ್ನು ಹಂಚುವುದು
12. ನಿಕ್ಷೇಪವು ಕಂಡುಬಂದ ಸ್ಥಳದ ಒಡೆತನವು ವಿವಾದದಲ್ಲಿರುವಾಗ ವ್ಯವಹರಣೆಗಳಿಗೆ ತಡೆ
13. ವಿವಾದದ ಇತ್ಯರ್ಥ ಮತ್ತು ನಿಕ್ಷೇಪದ ವಿಭಜನೆ
14. ನಿಕ್ಷೇಪದ ಮೌಲ್ಯವು ಒಂದು ಲಕ್ಷ ರೂಪಾಯಿ ಮೀರಿದಾಗ ವಿಭಜನೆ
15. ಸರ್ಕಾರದ ಪರವಾಗಿ ನಿಕ್ಷೇಪವನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರ

**ಅಧ್ಯಾಯ– IV**

**ಸಂಕೀರ್ಣ**

16. ಡೆಪ್ಯೂಟಿ ಕಮಿಷನರನ ತೀರ್ಮಾನವೇ ಅಂತಿಮವಾಗಿರುವುದು ಮತ್ತು ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ಅವನ ವಿರುದ್ಧ ಯಾವುದೇ ದಾವೆಗೆ ಅವಕಾಶವಿಲ್ಲದಿರುವುದು
17. ಡೆಪ್ಯೂಟಿ ಕಮಿಷನರನು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವುದು
18. ನೋಟೀಸು ಕೊಡಲು ತಪ್ಪುವುದು, ಇತ್ಯಾದಿಗಳಿಗಾಗಿ ನಿಕ್ಷೇಪವನ್ನು ಕಂಡವನಿಗೆ ದಂಡ ವಿಧಿಸುವುದು
19. 18ನೇ ಪ್ರಕರಣದ ಮೇರೆಗೆ ಅಪರಾಧಗಳನ್ನು ಎಸಗಲು ದುಷ್ಪ್ರೇರಿಸುವ ಒಡೆಯನಿಗೆ ದಂಡ ವಿಧಿಸುವುದು
20. ನಿಯಮ ರಚನಾಧಿಕಾರ
21. ನಿರಸನ ಮತ್ತು ಉಳಿಸುವಿಕೆಗಳು


## ಉದ್ದೇಶ ಮತ್ತು ಕಾರಣಗಳ ಹೇಳಿಕೆ

**I**

**1963ರ ಅಧಿನಿಯಮ 23:–** ಹೊಸ ಮೈಸೂರು ರಾಜ್ಯದ ವಿವಿಧ ಪ್ರದೇಶಗಳಲ್ಲಿ ನಿಕ್ಷೇಪ ನಿಧಿಗೆ ಸಂಬಂಧಿಸಿದಂತೆ ವಿವಿಧ ಕಾನೂನುಗಳು ಜಾರಿಯಲ್ಲಿವೆ. ಮುಂಬಯಿ ಪ್ರದೇಶ, ಮದರಾಸು ಪ್ರದೇಶ ಮತ್ತು ಕೊಡಗು ಜಿಲ್ಲೆ–ಇವುಗಳಲ್ಲಿ ಭಾರತ ನಿಕ್ಷೇಪ ನಿಧಿ ಅಧಿನಿಯಮ, 1878 (1878ರ ಕೇಂದ್ರ ಅಧಿನಿಯಮ VI) ಜಾರಿಯಲ್ಲಿದೆ. ಮೈಸೂರು ಪ್ರದೇಶ ಮತ್ತು ಹೈದರಾಬಾದ್ ಪ್ರದೇಶ ಇವುಗಳಲ್ಲಿ, ಮೈಸೂರು ನಿಕ್ಷೇಪ ನಿಧಿ ಅಧಿನಿಯಮ, 1910

ಮತ್ತು ಹೈದರಾಬಾದ್ ನಿಕ್ಷೇಪ ನಿಧಿ ಅಧಿನಿಯಮ, 1322 ಫಸಲಿ (ಹೈದರಾಬಾದ್ ಅಧಿನಿಯಮ 1322 ಫಸಲಿಯ III) ಅನುಕ್ರಮವಾಗಿ ಜಾರಿಯಲ್ಲಿವೆ. ಹೊಸ ರಾಜ್ಯದಾದ್ಯಂತ ಅನ್ವಯಿಸುವ ಏಕರೂಪದ ಕಾನೂನು ಇರುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಈ ವಿಧೇಯಕ.

ಈ ವಿಧೇಯಕದ ಪ್ರಮುಖ ಉಪಬಂಧಗಳು ಈ ಮುಂದಿನಂತಿವೆ:- ಮಣ್ಣಿನಲ್ಲಿ ಹುದುಗಿರುವ ಅಥವಾ ಭೂಮಿಗೆ ಹೊಂದಿಕೊಂಡಿರುವ ಯಾವುದರಲ್ಲಿಯೇ ಆಗಲಿ, ಹುದುಗಿರುವ ಹತ್ತು ರೂಪಾಯಿ ಮೊತ್ತ ಅಥವಾ ಮೌಲ್ಯವನ್ನು ಮೀರಿದ ಯಾವುದೇ ನಿಕ್ಷೇಪವು ಕಂಡುಬಂದಲ್ಲಿ, ಅದನ್ನು ಕಂಡ ವ್ಯಕ್ತಿ ಮತ್ತು ನಿಕ್ಷೇಪ ಕಂಡುಬಂದ ಸ್ಥಳದ ಮಾಲೀಕ ಹಾಗೂ ಅಧಿಭೋಗದಾರನು ನಿಕ್ಷೇಪವು ಕಂಡುಬಂದ ಬಗ್ಗೆ ಡೆಪ್ಯೂಟಿ ಕಮಿಷನರನಿಗೆ ತಿಳಿಸತಕ್ಕದ್ದು. ಡೆಪ್ಯೂಟಿ ಕಮಿಷನರನು ಅದರ ವಿವರಗಳನ್ನು ಸರ್ಕಾರಕ್ಕೆ, ಪುರಾತತ್ವ ಇಲಾಖೆಯ ನಿರ್ದೇಶಕರಿಗೆ ಮತ್ತು ನಿಯಮಿಸಲಾದ ಅಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ಆ ವಿವರಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿ ನಿಕ್ಷೇಪದಲ್ಲಿ ಆಸಕ್ತಿಯಿರುವ ವ್ಯಕ್ತಿಗಳು ವಿಚಾರಣೆಗೆ ಹಾಜರಾಗುವಂತೆ ತಿಳಿಸತಕ್ಕದ್ದು. ಯಾರೇ ವ್ಯಕ್ತಿಯು, ಒಂದು ನೂರು ವರ್ಷಗಳೊಳಗೆ ಅದನ್ನು ಹುದುಗಿಸಿಟ್ಟಿದ್ದನೇ ಹೇಗೆ ಎಂಬ ಬಗ್ಗೆ ಡೆಪ್ಯೂಟಿ ಕಮಿಷನರನು ನಿರ್ಧರಿಸುತ್ತಾನೆ ಮತ್ತು ಯಾರೇ ವ್ಯಕ್ತಿ ಆ ನಿಕ್ಷೇಪವು ತನ್ನದೆಂದು ಹೇಳಿದರೆ ಮತ್ತು ಅಂಥ ವ್ಯಕ್ತಿಯು ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ದಾವೆಯ ಮೂಲಕ ತನ್ನ ಹಕ್ಕನ್ನು ಸ್ಥಾಪಿಸಿದಲ್ಲಿ ಆ ನಿಕ್ಷೇಪವನ್ನು ಆ ವ್ಯಕ್ತಿಗೆ ನೀಡಲಾಗುವುದು. ಆದರೆ, ಆ ನಿಕ್ಷೇಪವು ಕಂಡುಬರುವುದಕ್ಕೆ ಮುಂಚೆ ನೂರು ವರ್ಷಗಳಿಗೂ ಹಿಂದೆ ಅದನ್ನು ಹುದುಗಿಸಿಡಲಾಗಿತ್ತೆಂದು ಡೆಪ್ಯೂಟಿ ಕಮಿಷನರನಿಗೆ ಕಂಡುಬಂದರೆ ಅಥವಾ ಮೇಲೆ ಹೇಳಲಾದಂತೆ ದಾವೆಯನ್ನು ಹೂಡಿಲ್ಲದಿದ್ದರೆ ಅಥವಾ ಅಂಥ ದಾವೆಯನ್ನು ವಜಾ ಮಾಡಿದ್ದರೆ, ಡೆಪ್ಯೂಟಿ ಕಮಿಷನರನು, ಆ ನಿಕ್ಷೇಪವನ್ನು ಒಡೆಯನಿಲ್ಲದ ನಿಕ್ಷೇಪವೆಂದು ಘೋಷಿಸಬಹುದು. ಅಂಥ ಘೋಷಣೆಯನ್ನು ಮಾಡಿದಾಗ, ಯಾರೇ ವ್ಯಕ್ತಿಯು ತಾನು ನಿಕ್ಷೇಪವು ಕಂಡುಬಂದ ಸ್ಥಳದ ಒಡೆಯನೆಂದು ಅದನ್ನು ಕ್ಲೇಮು ಮಾಡದಿದ್ದಲ್ಲಿ, ಆ ನಿಕ್ಷೇಪವನ್ನು ಕಂಡವನಿಗೆ ನೀಡತಕ್ಕದ್ದು. ಯಾರೇ ವ್ಯಕ್ತಿಯು, ಆ ಸ್ಥಳದ ಒಡೆಯನೆಂದು ಕ್ಲೇಮು ಮಾಡಿದರೆ, ಕಂಡವನು ಮತ್ತು ಆ ಸ್ಥಳದ ಒಡೆಯನ ನಡುವೆ ಸಮಭಾಗವಾಗಿ ಹಂಚತಕ್ಕದ್ದು ಮತ್ತು ಪಕ್ಷಕಾರರು ಹಂಚಿಕೆಗಾಗಿ ಇತರ ಯಾವುದೇ ವಿಧಾನವನ್ನು ಕುರಿತ ಒಪ್ಪಂದ ಮಾಡಿಕೊಂಡಿದ್ದ ಹೊರತು, ಕಂಡವನು ಒಂದು ಲಕ್ಷ ರೂ.ಗಳನ್ನು ಮೀರಿದ ಮೊಬಲಗಿಗೆ ಹಕ್ಕುದಾರನಾಗತಕ್ಕದ್ದಲ್ಲ. ರಾಜ್ಯ ಸರ್ಕಾರವು ಆ ನಿಧಿಯ ಮೌಲ್ಯವನ್ನು ಸಂದಾಯ ಮಾಡುವುದರ ಜೊತೆಗೆ ಆ ಮೌಲ್ಯದ $^{1}/_{5}$ ಭಾಗವೂ ಸೇರಿ ಆ ನಿಧಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು.

ಈ ವಿಧೇಯಕದ ಉಪಬಂಧಗಳನ್ನು ಉಲ್ಲಂಘಿಸಿದ ವ್ಯಕ್ತಿಗಳು, ಅಪರಾಧ ನಿರ್ಣಯವಾದ ಮೇಲೆ ದಂಡನೆಗೆ ಗುರಿಯಾಗತಕ್ಕದ್ದು.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ IV 2ಎ, ದಿನಾಂಕ 21ನೇ ಜೂನ್, 1962 ಪುಟಸಂಖ್ಯೆ 284 ರಲ್ಲಿ ಪ್ರಕಟಿತವಾಗಿದೆ.)

1963ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 23

(1963ರ ಜೂನ್ ಇಪ್ಪತ್ತೇಳನೇ ದಿನದಂದು [1][ಕರ್ನಾಟಕ ರಾಜಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ.)

# [1][ಕರ್ನಾಟಕ][1] ನಿಕ್ಷೇಪ ನಿಧಿ ಅಧಿನಿಯಮ, 1962

(1963ರ ಫೆಬ್ರವರಿ ಇಪ್ಪತ್ತೊಂದನೆಯ ದಿನದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆದಿದೆ.)

[1][ಕರ್ನಾಟಕ ರಾಜ್ಯ][1]ದಲ್ಲಿ ನಿಕ್ಷೇಪ ನಿಧಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ನಿಕ್ಷೇಪ ನಿಧಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿಮೂರನೆಯ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ದಿನಾಂಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ನಿಕ್ಷೇಪನಿಧಿ ಅಧಿನಿಯಮ, 1962 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗುತ್ತದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಡೆಪ್ಯೂಟಿ ಕಮಿಷನರ್" ಎಂದರೆ, ಈ ಅಧಿನಿಯಮದ ಮೇರೆಗೆ ಡೆಪ್ಯೂಟಿ ಕಮಿಷನರ್‌ನ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ನೇಮಕ ಮಾಡಬಹುದಾದಂಥ ಅಧಿಕಾರಿ ಮತ್ತು ಅಂಥ ಅಧಿಕಾರಿಯನ್ನು ನೇಮಕ ಮಾಡಿಲ್ಲದಿದ್ದರೆ, ಆ ಜಿಲ್ಲೆಯ ಜಿಲ್ಲಾಧಿಕಾರಿ;

(ಬಿ) "ನಿರ್ದೇಶಕ" ಎಂದರೆ, [1][ಕರ್ನಾಟಕದ ಪುರಾತತ್ವ ಶಾಸ್ತ್ರದ ಇಲಾಖೆಯ ನಿರ್ದೇಶಕ][1] ಮತ್ತು ಅದು ನಿರ್ದೇಶಕನ ಕರ್ತವ್ಯಗಳನ್ನು ನೆರವೇರಿಸಲು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯನ್ನು ಒಳಗೊಳ್ಳುತ್ತದೆ;

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿನಾಂಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಸಿ) "ಕಂಡವನು" ಎಂದರೆ, ಯಾರೇ ವ್ಯಕ್ತಿಯ ವ್ಯಕ್ತ ಅಥವಾ ಇಂಗಿತ ನಿರ್ದೇಶನದಲ್ಲಿ ಕೆಲಸ ಮಾಡುತ್ತಿರುವಾಗ ಯಾವುದೇ ನಿಕ್ಷೇಪವು ಕಂಡುಬಂದ ಸಂದರ್ಭದಲ್ಲಿ, ಅಂಥ ವ್ಯಕ್ತಿ ಮತ್ತು ಇತರ ಯಾವುದೇ ಸಂದರ್ಭದಲ್ಲಿ ನಿಕ್ಷೇಪವನ್ನು ಕಂಡ ವ್ಯಕ್ತಿ ;

(ಡಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಇ) "ಒಡೆಯ" ಎಂಬುದು, ಯಾವುದೇ ಭೂಮಿಯ ಅಥವಾ ಭೂಮಿಗೆ ಲಗತ್ತಾದ ವಸ್ತುವಿನ ಸಂಬಂಧದಲ್ಲಿ ಯಾವುದೇ ಕಾನೂನು ಅಥವಾ ಲಿಖಿತದ ಮೇರೆಗೆ ಅಂಥ ಭೂಮಿ ಅಥವಾ ವಸ್ತುವಿನಲ್ಲಿರುವ ನಿಧಿಗೆ ಹಕ್ಕು ಹೊಂದಿರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ :

ಪರಂತು, ಆ ಭೂಮಿಯು ಸರ್ಕಾರದ ಸ್ವತ್ತಾಗಿದ್ದರೆ, ಸರ್ಕಾರವು ಆ ಭೂಮಿಯ ಅಥವಾ ಅದಕ್ಕೆ ಲಗತ್ತಾದ ವಸ್ತುವಿನ ಒಡೆಯ ಎಂಬುದಾಗಿ ಭಾವಿಸತಕ್ಕದ್ದು;

(ಎಫ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ನಿಕ್ಷೇಪ" ಎಂದರೆ, ಮಣ್ಣಿನಲ್ಲಿ ಅಥವಾ ಅದಕ್ಕೆ ಲಗತ್ತಾದ ಯಾವುದೇ ವಸ್ತುವಿನಲ್ಲಿ ಹುದುಗಿಸಿಟ್ಟ ಯಾವುದೇ ಮೌಲ್ಯದ ಯಾವುದೇ ವಸ್ತು.

## ಅಧ್ಯಾಯ – II

## ನಿಕ್ಷೇಪದ ಬಗ್ಗೆ ನೋಟೀಸು, ವಿಚಾರಣೆ ಮತ್ತು ಘೋಷಣೆ

**3. ನಿಕ್ಷೇಪ ಕಂಡುಬಂದ ಬಗ್ಗೆ ಡೆಪ್ಯೂಟಿ ಕಮಿಷನರನಿಗೆ ನೋಟೀಸು.-** (1) ಹತ್ತು ರೂಪಾಯಿ ಮೊಬಲಗು ಅಥವಾ ಮೌಲ್ಯವನ್ನು ಮೀರಿದ ಯಾವುದೇ ನಿಕ್ಷೇಪ ಕಂಡುಬಂದಾಗ, ಕಂಡವನು ಡೆಪ್ಯೂಟಿ ಕಮಿಷನರನಿಗೆ ಈ ಮುಂದಿನವುಗಳ ಬಗ್ಗೆ ಆ ಕೂಡಲೇ ಲಿಖಿತ ನೋಟೀಸು ಕೊಡತಕ್ಕದ್ದು,-

(ಎ) ಅಂಥ ನಿಕ್ಷೇಪದ ಸ್ವರೂಪ ಮತ್ತು ಮೊಬಲಗು ಅಥವಾ ಅಂದಾಜು ಮೌಲ್ಯ;

(ಬಿ) ಅದು ಕಂಡುಬಂದ ಸ್ಥಳ ಮತ್ತು ಕಂಡುಬಂದ ಸಂದರ್ಭ; ಮತ್ತು

(ಸಿ) ಅದು ಕಂಡುಬಂದ ದಿನಾಂಕ;

ಮತ್ತು ಅವನು, ನಿಕ್ಷೇಪವನ್ನು ಅತ್ಯಂತ ಹತ್ತಿರದಲ್ಲಿರುವ ಸರ್ಕಾರಿ ಖಜಾನೆಯಲ್ಲಿ ಇಡತಕ್ಕದ್ದು ಅಥವಾ ಡೆಪ್ಯೂಟಿ ಕಮಿಷನರನು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಅದನ್ನು ಹಾಜರುಪಡಿಸಲು, ಡೆಪ್ಯೂಟಿ ಕಮಿಷನರನು ಯುಕ್ತವೆಂದು ಭಾವಿಸುವಂಥ ಭದ್ರತೆಯನ್ನು ಜಿಲ್ಲಾಧಿಕಾರಿಗೆ ಒದಗಿಸತಕ್ಕದ್ದು.

(2) ನಿಕ್ಷೇಪವು ಕಂಡುಬಂದ ಸ್ಥಳದ ಮಾಲೀಕನು, ತಾನೇ ಕಂಡವನಲ್ಲದಿದ್ದರೆ ಮತ್ತು ಅಂಥ ಸ್ಥಳದ ಅಧಿಭೋಗದಾರನು, ಅವನು ಕಂಡವನಾಗಲಿ ಅಥವಾ ಮಾಲೀಕನಾಗಲೀ ಆಗಿಲ್ಲದಿರುವಾಗ, ಸಂದರ್ಭಾನುಸಾರ ಒಡೆಯ ಅಥವಾ ಅಧಿಭೋಗದಾರನು ನಿಕ್ಷೇಪ ಕಂಡುಬಂದುದು ತನ್ನ ಅರಿವಿಗೆ ಬಂದ ದಿನಾಂಕದಿಂದ ಒಂದು ತಿಂಗಳು ಮುಗಿಯುವುದಕ್ಕೆ ಮುಂಚೆ (1)ನೇ ಉಪಪ್ರಕರಣದ (ಬಿ) ಮತ್ತು (ಸಿ) ಖಂಡಗಳಲ್ಲಿ ಉಲ್ಲೇಖಿಸಲಾದ ವಿವರಗಳನ್ನು ನಿರ್ದಿಷ್ಟಪಡಿಸಿ ಜಿಲ್ಲಾಧಿಕಾರಿಗೆ ಲಿಖಿತ ನೋಟೀಸನ್ನು ನೀಡತಕ್ಕದ್ದು.

**4. ಜಿಲ್ಲಾಧಿಕಾರಿಯಿಂದ ಅಧಿಸೂಚನೆ.–** ಜಿಲ್ಲಾಧಿಕಾರಿಯು, 3ನೇ ಪ್ರಕರಣದ ಮೇರೆಗೆ ನೋಟೀಸನ್ನು ಸ್ವೀಕರಿಸಿದ ಮೇಲೆ ಮತ್ತು ಯಾವುದೇ ಸ್ಥಳದಲ್ಲಿ ನಿಕ್ಷೇಪವು ಕಂಡುಬಂದ ಬಗ್ಗೆ ಇತರ ಯಾವುದೇ ರೀತಿಯಿಂದ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ತಾನು ಯುಕ್ತವೆಂದು ಭಾವಿಸುವಂಥ ವಿಚಾರಣೆ ಏನಾದರೂ ಇದ್ದರೆ, ಅದನ್ನು ಮಾಡಿದ ತರುವಾಯ ಈ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು, ಎಂದರೆ:–

(ಎ) ಅವನು ರಾಜ್ಯ ಸರ್ಕಾರಕ್ಕೆ, ನಿರ್ದೇಶಕನಿಗೆ ಮತ್ತು ನಿಯಮಿಸಲಾದ ಅಧಿಕಾರಿಗೆ ಸಾಧ್ಯವಾದಷ್ಟು ಮಟ್ಟಿಗೆ ಈ ಮುಂದಿನವುಗಳನ್ನು ನಮೂದಿಸಿ ಒಂದು ವರದಿಯನ್ನು ಕಳುಹಿಸತಕ್ಕದ್ದು,–

(i) ನಿಕ್ಷೇಪವನ್ನು ಕಂಡವನ ಹೆಸರು ಮತ್ತು ಇತರ ವಿವರಗಳು;

(ii) ನಿಕ್ಷೇಪವು ಕಂಡುಬಂದ ಭೂಮಿಯ ಒಡೆಯ ಮತ್ತು ಅಧಿಭೋಗದಾರನ ಹೆಸರು ಮತ್ತು ಇತರ ವಿವರಗಳು;

(iii) ನಿಕ್ಷೇಪದ ಸ್ವರೂಪ ಮತ್ತು ವಿವರಗಳು;

(iv) ನಿಕ್ಷೇಪದ ಅಂದಾಜು ಮೌಲ್ಯ;

(v) ನಿಕ್ಷೇಪವು ಕಂಡುಬಂದ ಸ್ಥಳ ಮತ್ತು ದಿನಾಂಕ;

(vi) ನಿಕ್ಷೇಪದ ಮೂಲನೆಲೆ ಮತ್ತು ಸುತ್ತುವರಿದ ಪ್ರದೇಶ;

(ಬಿ) ಅವನು ನಿಕ್ಷೇಪದ ಸ್ವರೂಪ, ಮೊಬಲಗು ಮತ್ತು ಅಂದಾಜು ಮೌಲ್ಯ ಮತ್ತು ಅಂಥ ನಿಕ್ಷೇಪವು ಕಂಡುಬಂದ ಸ್ಥಳ ಮತ್ತು ದಿನಾಂಕವನ್ನು ನಿರ್ದಿಷ್ಟಪಡಿಸಿ ನಿಯಮಿಸಲಾದ ರೀತಿಯಲ್ಲಿ ಒಂದು ಅಧಿಸೂಚನೆಯನ್ನು ಪ್ರಕಟಿಸತಕ್ಕದ್ದು ಮತ್ತು ನಿಕ್ಷೇಪವನ್ನು ಅಥವಾ ಅದರ ಯಾವುದೇ ಭಾಗವನ್ನು ಕ್ಲೇಮು ಮಾಡುವ ಎಲ್ಲ ವ್ಯಕ್ತಿಗಳನ್ನು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನದಂದು ಅದರಲ್ಲಿ ನಿರ್ದಿಷ್ಟಪಡಿಸಿದಂಥ ವೇಳೆಯಲ್ಲಿ ಮತ್ತು ಸ್ಥಳದಲ್ಲಿ ಡೆಪ್ಯೂಟಿ ಕಮಿಷನರನ ಮುಂದೆ ಖುದ್ದಾಗಿ ಅಥವಾ ಏಜೆಂಟ್‌ನ ಮೂಲಕ ಹಾಜರಾಗಲು ಅಗತ್ಯಪಡಿಸತಕ್ಕದ್ದು. ಹಾಗೆ ನಿರ್ದಿಷ್ಟಪಡಿಸಿದ ದಿನವು ಅಂಥ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದ ತರುವಾಯ ನಾಲ್ಕು ತಿಂಗಳುಗಳಿಗಿಂತ ಮುಂಚಿನದಲ್ಲದ ಅಥವಾ ಆರು ತಿಂಗಳುಗಳಿಗಿಂತ ತರುವಾಯದ್ದಲ್ಲದ ದಿನವಾಗಿರತಕ್ಕದ್ದು;

(ಸಿ) ನಿಕ್ಷೇಪವು ಕಂಡುಬಂದ ಸ್ಥಳವು, ಕಂಡುಬಂದ ದಿನಾಂಕದಂದು ಕಂಡವನನ್ನು ಹೊರತುಪಡಿಸಿ, ಯಾವನೇ ಇತರ ವ್ಯಕ್ತಿಯ ಸ್ವಾಧೀನದಲ್ಲಿತ್ತೆಂದು ಅಥವಾ ಆ ವ್ಯಕ್ತಿಗೆ ಸೇರಿತ್ತೆಂದು ಡೆಪ್ಯೂಟಿ ಕಮಿಷನರನಿಗೆ ಕಂಡುಬಂದರೆ, ಡೆಪ್ಯೂಟಿ ಕಮಿಷನರನು ಅಂಥ ವ್ಯಕ್ತಿಗೆ ಮತ್ತು ಕಂಡವನಿಗೆ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಅಧಿಸೂಚನೆಯ ಒಂದು ಪ್ರತಿಯನ್ನು, ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗನೆ ನೀಡತಕ್ಕದ್ದು.

**5. ನಿಕ್ಷೇಪದ ಹಕ್ಕಿನ ಮುಟ್ಟುಗೋಲು.–** 4ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ನಿಕ್ಷೇಪಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ನಿಕ್ಷೇಪವು ಕಂಡುಬಂದಂಥ ಸ್ಥಳದ ಒಡೆಯನೆಂದು ಅಥವಾ ಅನ್ಯಥಾ ಯಾವುದೇ ಹಕ್ಕನ್ನು ಹೊಂದಿರುವ ಮತ್ತು 4ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಮೂಲಕ ಅಗತ್ಯಪಡಿಸಿದಂತೆ ಹಾಜರಾಗದಿರುವ ಯಾರೇ ವ್ಯಕ್ತಿಯ ಅಂಥ ಹಕ್ಕು ಮುಟ್ಟುಗೋಲಾಗತಕ್ಕದ್ದು.

**6. ಡೆಪ್ಯೂಟಿ ಕಮಿಷನರ್‌ನಿಂದ ವಿಚಾರಣೆ.–** 4ನೇ ಪ್ರಕರಣದ ಅಡಿಯಲ್ಲಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನದಂದು ಡೆಪ್ಯೂಟಿ ಕಮಿಷನರನು ನಿಕ್ಷೇಪವನ್ನು ತನ್ನ ಮುಂದೆ ಹಾಜರುಪಡಿಸುವಂತೆ

ಮಾಡತಕ್ಕದ್ದು ಮತ್ತು ಹಾಜರಾಗುವ ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅವಶ್ಯಕವಾಗಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ,-

(ಎ) ಅಂಥ ನಿಕ್ಷೇಪವನ್ನು ಕಂಡ ವ್ಯಕ್ತಿ , ಅದು ಕಂಡುಬಂದ ಸ್ಥಳ ಮತ್ತು ಸಂದರ್ಭಗಳು; ಮತ್ತು

(ಬಿ) ಸಾಧ್ಯವಾದಷ್ಟು ಮಟ್ಟಿಗೆ, ಅಂಥ ನಿಕ್ಷೇಪವನ್ನು ಹುದುಗಿಸಿಟ್ಟ ವ್ಯಕ್ತಿ ಮತ್ತು ಹುದುಗಿಸಿಟ್ಟಂಥ ಸಂದರ್ಭಗಳು

-ಇವುಗಳನ್ನು ನಿರ್ಧರಿಸತಕ್ಕದ್ದು.

**7. ಕೆಲವು ಸಂದರ್ಭಗಳಲ್ಲಿ ನಿಕ್ಷೇಪವನ್ನು ಕ್ಲೇಮು ಮಾಡುವ ವ್ಯಕ್ತಿಯಿಂದ ದಾವೆ.-** (1) 6ನೇ ಪ್ರಕರಣದ ಮೇರೆಗೆ ವಿಚಾರಣೆ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರನು, 4ನೇ ಪ್ರಕರಣದ ಅಡಿಯಲ್ಲಿನ ಅಧಿಸೂಚನೆ ಮೂಲಕ ಅಗತ್ಯಪಡಿಸಲಾದಂತೆ ಹಾಜರಾಗುವಂಥ ಮತ್ತು ನಿಕ್ಷೇಪವನ್ನು ಕ್ಲೇಮು ಮಾಡುವಂಥ ವ್ಯಕ್ತಿಯು ಅಥವಾ ಯಾವ ವ್ಯಕ್ತಿಯ ಅಧೀನದಲ್ಲಿ ಅಂಥ ವ್ಯಕ್ತಿಯು ಕ್ಲೇಮು ಮಾಡುವನೋ ಆ ಯಾರೇ ಇತರ ವ್ಯಕ್ತಿಯು ನಿಕ್ಷೇಪವು ಕಂಡುಬಂದ ದಿನಾಂಕಕ್ಕೆ ಮುಂಚೆ ಒಂದು ನೂರು ವರ್ಷಗಳೊಳಗೆ ಅದನ್ನು ಹುದುಗಿಸಿಟ್ಟಿದ್ದನೆಂದು ನಂಬಲು ಕಾರಣಗಳಿವೆಯೆಂಬುದಾಗಿ ಡೆಪ್ಯೂಟಿ ಕಮಿಷನರನು ಪರಿಗಣಿಸಿದರೆ, ಕ್ಲೇಮುದಾರನು ತನ್ನ ಹಕ್ಕನ್ನು ಸ್ಥಾಪಿಸಲು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು ತಾನು ಸಾಕಷ್ಟೆಂದು ಭಾವಿಸುವಂಥ ಅವಧಿಯವರೆಗೆ ಪ್ರಕರಣದ ಸುನಾವಣೆಯನ್ನು ಮುಂದಕ್ಕೆ ಹಾಕುವ ಆದೇಶವನ್ನು ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಹೂಡಿದ ದಾವೆಯಲ್ಲಿ ಕ್ಲೇಮುದಾರನು ನಿಕ್ಷೇಪದ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಿದಲ್ಲಿ, ಸಿವಿಲ್ ನ್ಯಾಯಾಲಯವು ನಿಕ್ಷೇಪದ ಮೌಲ್ಯದ ನಾಲ್ಕನೇ ಒಂದರಷ್ಟನ್ನು ಮೀರದ ಮೌಲ್ಯವುಳ್ಳ ಪಾರಿತೋಷಕವನ್ನು ಕಂಡವನಿಗೆ ನೀಡಬಹುದು ಮತ್ತು ನಿಕ್ಷೇಪದ ಮೇಲೆ ತನ್ನ ಹಕ್ಕನ್ನು ಸ್ಥಾಪಿಸುವ ಕ್ಲೇಮುದಾರನು ಅದನ್ನು ಸಂದಾಯ ಮಾಡತಕ್ಕದ್ದು.

**8. ಕೆಲವು ಸಂದರ್ಭಗಳಲ್ಲಿ ನಿಕ್ಷೇಪವು ಒಡೆಯನಿಲ್ಲದ್ದು ಎಂದು ಘೋಷಿಸುವುದು.-** (1) (ಎ) 7ನೇ ಪ್ರಕರಣದ ಮೇರೆಗೆ ವಿಚಾರಣೆ ಮಾಡಿದ ಮೇಲೆ, 7ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು ನಿಕ್ಷೇಪವು ಕಂಡುಬಂದ ದಿನಾಂಕಕ್ಕೆ ಮುಂಚೆ ಒಂದು ನೂರು ವರ್ಷದೊಳಗೆ ಅದನ್ನು ಹುದುಗಿಸಿಟ್ಟಿದ್ದನೆಂದು ನಂಬಲು ಕಾರಣಗಳಿಲ್ಲವೆಂಬುದಾಗಿ ಡೆಪ್ಯೂಟಿ ಕಮಿಷನರನು ಪರಿಗಣಿಸಿದರೆ; ಅಥವಾ

(ಬಿ) ಒಂದು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು (7)ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅವಧಿಯನ್ನು ನಿಗದಿಪಡಿಸಿದ್ದು, ಅಂಥ ಅವಧಿಯೊಳಗೆ ಯಾವುದೇ ದಾವೆಯನ್ನು ಹೂಡಿಲ್ಲವೆಂದು ಡೆಪ್ಯೂಟಿ ಕಮಿಷನರನಿಗೆ ತಿಳಿದುಬಂದರೆ; ಅಥವಾ

(ಸಿ) ಅಂಥ ಅವಧಿಯೊಳಗೆ ದಾವೆಯನ್ನು ಹೂಡಿದ್ದು, ವಾದಿಯ ಕ್ಲೇಮನ್ನು ಅಂತಿಮವಾಗಿ ತಿರಸ್ಕರಿಸಲಾಗಿದ್ದರೆ

-ಆಗ ಡೆಪ್ಯೂಟಿ ಕಮಿಷನರನು, ಆ ನಿಕ್ಷೇಪವು ಒಡೆಯನಿಲ್ಲದ ನಿಕ್ಷೇಪವೆಂಬುದಾಗಿ ಘೋಷಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿರುವಾಗ ಡೆಪ್ಯೂಟಿ ಕಮಿಷನರನು, ರಾಜ್ಯ ಸರ್ಕಾರಕ್ಕೆ ಮತ್ತು ನಿಯಮಿಸಲಾದ ಅಧಿಕಾರಿಗೆ ಆ ಸಂಬಂಧದಲ್ಲಿ ಒಂದು ವರದಿಯನ್ನು ಕಳುಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಘೋಷಣೆಯಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಘೋಷಣೆಯ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಆ ಘೋಷಣೆಯ ವಿರುದ್ಧ [1][ಕರ್ನಾಟಕ ರಾಜಸ್ವ ಅಪೀಲು ನ್ಯಾಯಾಧಿಕರಣ][1]ಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿಗೆ ಒಳಪಟ್ಟು ಅಂಥ ಪ್ರತಿಯೊಂದು ಘೋಷಣೆಯು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿನಾಂಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅಧ್ಯಾಯ - III

## ಒಡೆಯನಿಲ್ಲದ್ದು ಎಂದು ಘೋಷಿಸಲಾದ ನಿಕ್ಷೇಪದ ವಿಲೇವಾರಿ

**9. ಘೋಷಣೆಯ ತರುವಾಯದ ವ್ಯವಹರಣೆಗಳು.-** 8ನೇ ಪ್ರಕರಣದ ಮೇರೆಗೆ ನಿಕ್ಷೇಪವು ಒಡೆಯನಿಲ್ಲದ್ದು ಎಂದು ಘೋಷಣೆಯನ್ನು ಮಾಡಿದಾಗ, ಅಂಥ ನಿಕ್ಷೇಪವನ್ನು ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು.

**10. ಯಾರೇ ವ್ಯಕ್ತಿಯು ಸ್ಥಳದ ಒಡೆಯನೆಂದು ಕ್ಲೇಮು ಮಾಡದಿದ್ದರೆ ನಿಕ್ಷೇಪವನ್ನು ಕಂಡವನಿಗೆ ನೀಡುವುದು.-** ಯಾವುದೇ ನಿಕ್ಷೇಪಕ್ಕೆ ಸಂಬಂಧಿಸಿದಂತೆ, 8ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದಾಗ ಮತ್ತು ಅಂಥ ನಿಕ್ಷೇಪ ಕಂಡವನನ್ನು ಹೊರತುಪಡಿಸಿ ಯಾರೇ ವ್ಯಕ್ತಿಯು, 6ನೇ ಪ್ರಕರಣದ ಅಡಿಯಲ್ಲಿ ವಿಚಾರಣೆಗೆ ಹಾಜರಾಗದಿದ್ದಾಗ ಮತ್ತು ನಿಕ್ಷೇಪವು ಕಂಡುಬಂದ ಸ್ಥಳದ ಒಡೆಯನಾಗಿ ಅಥವಾ ಅನ್ಯಥಾ ಅದನ್ನು ಅಥವಾ ಅದರ

ಒಂದು ಭಾಗವನ್ನು ಕ್ಲೇಮು ಮಾಡದಿದ್ದಾಗ ಜಿಲ್ಲಾಧಿಕಾರಿಯು, 14ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅದನ್ನು ಅಂಥ ನಿಕ್ಷೇಪವನ್ನು ಕಂಡವನಿಗೆ ಕೊಡತಕ್ಕದ್ದು.

**11. ಅಂಥ ಒಬ್ಬನೇ ವ್ಯಕ್ತಿಯು ಕ್ಲೇಮು ಮಾಡಿದಾಗ ಮತ್ತು ಅವನ ಕ್ಲೇಮಿನ ಬಗ್ಗೆ ವಿವಾದವಿಲ್ಲದಿದ್ದಾಗ, ನಿಕ್ಷೇಪವನ್ನು ಹಂಚುವುದು.**- (1) ಯಾವುದೇ ನಿಕ್ಷೇಪಕ್ಕೆ ಸಂಬಂಧಿಸಿದಂತೆ, 8ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದಾಗ ಮತ್ತು ಅಂಥ ನಿಕ್ಷೇಪವನ್ನು ಕಂಡವನನ್ನು ಹೊರತುಪಡಿಸಿ ಒಬ್ಬನೇ ವ್ಯಕ್ತಿಯು 6ನೇ ಪ್ರಕರಣದ ಮೇರೆಗೆ ವಿಚಾರಣೆಗೆ ಹಾಜರಾದಾಗ ಮತ್ತು ನಿಕ್ಷೇಪವನ್ನು ಅಥವಾ ಅದರ ಭಾಗವನ್ನು ಕ್ಲೇಮು ಮಾಡಿದಾಗ ಮತ್ತು ಅಂಥ ವ್ಯಕ್ತಿಯ ಕ್ಲೇಮಿನ ಬಗ್ಗೆ ಕಂಡವನಿಂದ ಯಾವುದೇ ತಕರಾರು ಇಲ್ಲದಿರುವಾಗ, ಡೆಪ್ಯೂಟಿ ಕಮಿಷನರನು 15ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಮುಂದಿನ ರೀತಿಯಲ್ಲಿ ನಿಕ್ಷೇಪವನ್ನು ಕಂಡವನಿಗೆ ಮತ್ತು ಹಾಗೆ ಕ್ಲೇಮು ಮಾಡುವ ವ್ಯಕ್ತಿಗೆ ಹಂಚಲು ಕ್ರಮ ಕೈಗೊಳ್ಳತಕ್ಕದ್ದು, ಎಂದರೆ:-

(ಎ) ಕಂಡವನು ಮತ್ತು ಹಾಗೆ ಕ್ಲೇಮು ಮಾಡುವ ವ್ಯಕ್ತಿಯು ನಿಕ್ಷೇಪದ ವಿಲೇವಾರಿಯ ಬಗ್ಗೆ ಯಾವುದೇ ಒಪ್ಪಂದವನ್ನು ಮಾಡಿಕೊಂಡಿದ್ದು ಅದು ಆಗ ಜಾರಿಯಲ್ಲಿದ್ದರೆ ಆ ನಿಕ್ಷೇಪವನ್ನು ಅಂಥ ಒಪ್ಪಂದಕ್ಕೆ ಅನುಸಾರವಾಗಿ ವಿಲೇವಾರಿ ಮಾಡತಕ್ಕದ್ದು;

(ಬಿ) ಕಂಡವನು ಮತ್ತು ಹಾಗೆ ಕ್ಲೇಮು ಮಾಡುವ ವ್ಯಕ್ತಿಯು ನಿಕ್ಷೇಪದ ವಿಲೇವಾರಿಯ ಬಗ್ಗೆ ಯಾವುದೇ ಒಪ್ಪಂದವನ್ನು ಮಾಡಿಕೊಂಡಿದ್ದು, ಆಗ ಅದು ಜಾರಿಯಲ್ಲಿಲ್ಲದಿದ್ದರೆ ಆ ಮೊತ್ತದಲ್ಲಿ ಅಥವಾ ಮೌಲ್ಯದಲ್ಲಿ ಒಂದು ಲಕ್ಷ ರೂ.ಗಳನ್ನು ಮೀರದ ನಿಕ್ಷೇಪದ ಅರ್ಧವನ್ನು, ಅದನ್ನು ಕಂಡವನಿಗೆ ಮತ್ತು ಉಳಿದ ಭಾಗವನ್ನು ಅಂಥ ವ್ಯಕ್ತಿಗೆ ಹಂಚತಕ್ಕದ್ದು:

ಪರಂತು, ಡೆಪ್ಯೂಟಿ ಕಮಿಷನರನು, ಯಾವುದೇ ಸಂದರ್ಭದಲ್ಲಿ ತಾನು ಸೂಕ್ತವೆಂದು ಭಾವಿಸಿದರೆ, (ಎ) ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಯಾವುದೇ ನಿಕ್ಷೇಪವನ್ನು ಹಂಚುವುದಕ್ಕೆ ಬದಲಾಗಿ,-

(i) ಆ ಪಕ್ಷಕಾರರ ಪೈಕಿ ಒಬ್ಬನು ಇನ್ನೊಬ್ಬ ಪಕ್ಷಕಾರನಿಗೆ ಸಂದಾಯ ಮಾಡುವುದಕ್ಕಾಗಿ, ಡೆಪ್ಯೂಟಿ ಕಮಿಷನರನು, ಸಂದರ್ಭಾನುಸಾರ ಅಂಥ ಇನ್ನೊಬ್ಬ ಪಕ್ಷಕಾರನ ಪಾಲಿಗೆ ಸಮಾನವಾದದ್ದೆಂದು ಅಥವಾ ಹಾಗೆ ಹಂಚಿದುದಕ್ಕಿಂತ ಹೆಚ್ಚಿನದೆಂದು ನಿಗದಿಪಡಿಸಬಹುದಾದಂಥ ಹಣದ ಮೊತ್ತವನ್ನು ಡೆಪ್ಯೂಟಿ ಕಮಿಷನರನಿಗೆ ಸಂದಾಯ ಮಾಡಿದ ಮೇಲೆ ಅವರಿಬ್ಬರಲ್ಲಿ ಒಬ್ಬನಿಗೆ ಇಡೀ ನಿಕ್ಷೇಪವನ್ನು ಅಥವಾ ಅವನ ಪಾಲಿಗಿಂತ ಹೆಚ್ಚಿನ ಪಾಲನ್ನು ಹಂಚಬಹುದು;

(ii) ರಾಜ್ಯ ಸರ್ಕಾರದ ಮಂಜೂರಾತಿಯೊಂದಿಗೆ ಮತ್ತು ಅದರ ಸೂಚನೆಗಳು ಯಾವುವಾದರೂ ಇದ್ದಲ್ಲಿ ಅವುಗಳಿಗೊಳಪಟ್ಟು, ಅಂಥ ನಿಕ್ಷೇಪವನ್ನು ಅಥವಾ ಅದರ ಯಾವುದೇ ಭಾಗವನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಬಹುದು ಮತ್ತು ಆ ಮಾರಾಟದಿಂದ ಬಂದ ಮೊತ್ತವನ್ನು ಸಂದರ್ಭಾನುಸಾರ (ಎ) ಅಥವಾ (ಬಿ) ಖಂಡಕ್ಕೆ ಅನುಸಾರವಾಗಿ ಪಕ್ಷಕಾರರಿಗೆ ಹಂಚಬಹುದು:

ಮತ್ತೂ ಪರಂತು, ಡೆಪ್ಯೂಟಿ ಕಮಿಷನರನು, 8ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದಾಗ, ಅ ಂಥ ಘೋಷಣೆಯ ದಿನಾಂಕದಿಂದ ಅರವತ್ತು ದಿನಗಳು ಮುಗಿಯುವ ತನಕ ಅಥವಾ ಅಂಥ ಘೋಷಣೆಯ ವಿರುದ್ಧ 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಹೂಡಿದರೆ, ಅಂಥ ಅಪೀಲು ವಜಾ ಆಗುವ ತನಕ, ಇವುಗಳಲ್ಲಿ ಯಾವುದು ಅನಂತರವೋ ಆ ತನಕ, ಈ ಉಪಪ್ರಕರಣದ ಮೇರೆಗಿನ ಹಂಚಿಕೆಯನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಹಂಚಿಕೆಯನ್ನು ಮಾಡಿದಾಗ, ಅಂಥ ಹಂಚಿಕೆಯ ಮೇರೆಗೆ ಪಕ್ಷಕಾರರು ಅನುಕ್ರಮವಾಗಿ ಹಕ್ಕುಳ್ಳವರಾಗುವಂಥ ನಿಕ್ಷೇಪದ ಭಾಗಗಳನ್ನು ಅಥವಾ ಅದಕ್ಕೆ ಬದಲಾಗಿ ಹಣವನ್ನು ಡೆಪ್ಯೂಟಿ ಕಮಿಷನರನು ಪಕ್ಷಕಾರರಿಗೆ ಕೊಡತಕ್ಕದ್ದು.

**12. ನಿಕ್ಷೇಪವು ಕಂಡುಬಂದ ಸ್ಥಳದ ಒಡೆತನವು ವಿವಾದದಲ್ಲಿರುವಾಗ ವ್ಯವಹರಣೆಗಳಿಗೆ ತಡೆ.**- ಯಾವುದೇ ನಿಕ್ಷೇಪಕ್ಕೆ ಸಂಬಂಧಿಸಿದಂತೆ, 8ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದಾಗ ಮತ್ತು 8ನೇ ಪ್ರಕರಣದ ಮೇರೆಗಿನ ವಿಚಾರಣೆಯಲ್ಲಿ ಇಬ್ಬರು ಅಥವಾ ಹೆಚ್ಚು ಮಂದಿ ಹಾಜರಾಗಿದ್ದು ಅವರಲ್ಲಿ ಪ್ರತಿಯೊಬ್ಬನೂ ಅಂಥ ನಿಕ್ಷೇಪವು ಕಂಡುಬಂದ ಸ್ಥಳದ ಒಡೆಯನೆಂದು ಅಥವಾ ಅನ್ಯಥಾ ಕ್ಲೇಮು ಮಾಡಿದಾಗ ಅಥವಾ ಹಾಗೆ ಹಾಜರಾದ ಮತ್ತು ಕ್ಲೇಮು ಮಾಡಿದ ಯಾರೇ ವ್ಯಕ್ತಿಯ ಹಕ್ಕಿನ ಬಗ್ಗೆ ಅಂಥ ನಿಕ್ಷೇಪವನ್ನು ಕಂಡವನು ವಿವಾದವನ್ನು ಎತ್ತಿದಾಗ, ಡೆಪ್ಯೂಟಿ ಕಮಿಷನರನು ಅಂಥ ನಿಕ್ಷೇಪವನ್ನು ತನ್ನಲ್ಲೇ ಇಟ್ಟುಕೊಳ್ಳತಕ್ಕದ್ದು ಮತ್ತು ಆ ವಿಷಯದ ಬಗ್ಗೆ ಸಿವಿಲ್ ನ್ಯಾಯಾಲಯವು ವಿಚಾರಣೆ ಮಾಡುವ ಮತ್ತು ಅದನ್ನು ನಿರ್ಧರಿಸುವ ದೃಷ್ಟಿಯಿಂದ ಅವನು ವ್ಯವಹರಣೆಗಳನ್ನು ತಡೆಹಿಡಿಯುವ ಆದೇಶವನ್ನು ಮಾಡತಕ್ಕದ್ದು.

**13. ವಿವಾದದ ಇತ್ಯರ್ಥ ಮತ್ತು ನಿಕ್ಷೇಪದ ವಿಭಜನೆ.-** (1) 12ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಅದರಲ್ಲಿ ಉಲ್ಲೇಖಿಸಲಾದ ಯಾವುದೇ ಹಕ್ಕನ್ನು ಕ್ಲೇಮು ಮಾಡುವ ವ್ಯಕ್ತಿಯು, ಅವನ ಹಕ್ಕನ್ನು ಘೋಷಿಸುವ ಡಿಕ್ರಿಯನ್ನು ಪಡೆಯಲು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬಹುದು ಮತ್ತು ಅಂಥ ಪ್ರತಿಯೊಂದು ದಾವೆಯಲ್ಲಿ ನಿಕ್ಷೇಪವನ್ನು ಕಂಡವನನ್ನು ಮತ್ತು ಡೆಪ್ಯೂಟಿ ಕಮಿಷನರ್‌ನ ಮುಂದೆ ಅಂಥ ಕ್ಲೇಮಿನ ಬಗ್ಗೆ ವಿವಾದವನ್ನು ಎತ್ತುವ ಎಲ್ಲ ವ್ಯಕ್ತಿಗಳನ್ನು ಪ್ರತಿವಾದಿಗಳನ್ನಾಗಿ ಮಾಡತಕ್ಕದ್ದು.

(2) ಅಂಥ ಯಾವುದೇ ದಾವೆಯನ್ನು ಹೂಡಲಾಗಿದ್ದರೆ ಮತ್ತು ವಾದಿಯ ಕ್ಲೇಮು ಅಂತಿಮವಾಗಿ ಸ್ಥಾಪಿತವಾದರೆ, ಡೆಪ್ಯೂಟಿ ಕಮಿಷನರನು 11ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಅವನಿಗೆ ಮತ್ತು ನಿಕ್ಷೇಪವನ್ನು ಕಂಡವನಿಗೆ ಆ ನಿಕ್ಷೇಪವನ್ನು ಹಂಚತಕ್ಕದ್ದು.

(3) ಹಿಂದೆ ಹೇಳಿದಂತೆ ಅಂಥ ಯಾವುದೇ ದಾವೆಯನ್ನು ಹೂಡಲಾಗಿಲ್ಲದಿದ್ದರೆ ಅಥವಾ ಅಂಥ ಎಲ್ಲ ದಾವೆಗಳಲ್ಲಿ ವಾದಿಗಳ ಕ್ಲೇಮುಗಳನ್ನು ಅಂತಿಮವಾಗಿ ತಿರಸ್ಕರಿಸಲಾಗಿದ್ದರೆ, ಡೆಪ್ಯೂಟಿ ಕಮಿಷನರನು, 14ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಆ ನಿಕ್ಷೇಪವನ್ನು ಕಂಡವನಿಗೆ ಕೊಡತಕ್ಕದ್ದು.

**14. ನಿಕ್ಷೇಪದ ಮೌಲ್ಯವು ಒಂದು ಲಕ್ಷ ರೂಪಾಯಿ ಮೀರಿದಾಗ ವಿಭಜನೆ.-** 10ನೇ ಪ್ರಕರಣದಲ್ಲಿ ಅಥವಾ 13ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಂದರ್ಭಗಳಲ್ಲಿ, ಕಂಡುಬಂದ ನಿಕ್ಷೇಪದ ಮೊಬಲಗು ಅಥವಾ ಮೌಲ್ಯವು ಒಂದು ಲಕ್ಷ ರೂಪಾಯಿ ಮೀರಿದರೆ, ಒಂದು ಲಕ್ಷ ರೂಪಾಯಿ ಮೊಬಲಗಿನಷ್ಟು ಅಥವಾ ಮೌಲ್ಯದಷ್ಟು ನಿಕ್ಷೇಪವನ್ನು ಕಂಡವನಿಗೆ ಕೊಡತಕ್ಕದ್ದು ಮತ್ತು ಅದಕ್ಕೆ ಮೀರಿದುದು ಸರ್ಕಾರಕ್ಕೆ ಸೇರಿದ್ದೆಂದು ಘೋಷಿಸತಕ್ಕದ್ದು.

**15. ಸರ್ಕಾರದ ಪರವಾಗಿ ನಿಕ್ಷೇಪವನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರ.-** (1) ಡೆಪ್ಯೂಟಿ ಕಮಿಷನರನು, 8ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದ ತರುವಾಯ ಮತ್ತು ಅದರಲ್ಲಿ ಈ ಹಿಂದೆ ಉಪಬಂಧಿಸಲಾದಂತೆ ಆ ನಿಕ್ಷೇಪವನ್ನು ನೀಡುವ ಅಥವಾ ವಿಭಜಿಸುವ ಮುಂಚೆ, ಯಾವುದೇ ಸಮಯದಲ್ಲಿ ಆ ನಿಕ್ಷೇಪವನ್ನು ಅಥವಾ ನಿರ್ದಿಷ್ಟಪಡಿಸಿದ ಅದರ ಯಾವುದೇ ಭಾಗವನ್ನು, ಅಂಥ ನಿಕ್ಷೇಪದ ಅಥವಾ ಅದರ ಭಾಗದ ಸಾಮಗ್ರಿಗಳ ಮೌಲ್ಯಕ್ಕೆ ಸಮನಾದ ಮೊತ್ತವನ್ನು ಅಂಥ ಮೌಲ್ಯದ ಐದನೇ ಒಂದು ಭಾಗದಷ್ಟರ ಜೊತೆಗೆ, ಅದಕ್ಕೆ ಹಕ್ಕುಳ್ಳವರಾದ ವ್ಯಕ್ತಿಗಳಿಗೆ ಸಂದಾಯ ಮಾಡುವ ಮೂಲಕ ಸರ್ಕಾರದ ಪರವಾಗಿ ಅದನ್ನು ಸ್ವಾಧೀನಪಡಿಸಿಕೊಳ್ಳುವ ತನ್ನ ಉದ್ದೇಶವನ್ನು, ಸಹಿಹಾಕಿ ಲಿಖಿತದಲ್ಲಿ ಘೋಷಿಸಬಹುದು ಮತ್ತು ಅಂಥ ಮೊತ್ತವನ್ನು ಅ ಂಥ ವ್ಯಕ್ತಿಯ ಹೆಸರಿಗೆ ಜಮೆ ಮಾಡಲು ಸರ್ಕಾರದ ಖಜಾನೆಯಲ್ಲಿ ಠೇವಣಿಯಿಡಬಹುದು ಮತ್ತು ಆ ತರುವಾಯ ಅಂಥ ನಿಕ್ಷೇಪ ಅಥವಾ ಅದರ ಭಾಗವನ್ನು ಸರ್ಕಾರದ ಸ್ವತ್ತು ಎಂಬುದಾಗಿ ಭಾವಿಸತಕ್ಕದ್ದು ಮತ್ತು ಹಾಗೆ ಠೇವಣಿಯಿಟ್ಟ ಹಣವು ಅಂಥ ನಿಕ್ಷೇಪ ಅಥವಾ ಅದರ ಭಾಗವಾಗಿದ್ದಿದ್ದರೆ ಹೇಗೋ ಹಾಗೆ ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ನಿಕ್ಷೇಪದ ಅಥವಾ ಅದರ ಭಾಗದ ಸಾಮಗ್ರಿಗಳ ಮೌಲ್ಯವನ್ನು ನಿರ್ಧರಿಸುವಲ್ಲಿ, ಅವುಗಳ ಐತಿಹಾಸಿಕ ಅಥವಾ ಪುರಾತತ್ವ ಶಾಸ್ತ್ರದ ಪ್ರಾಮುಖ್ಯತೆಯ ಕಾರಣಕ್ಕಾಗಿ ಅಂಥ ಸಾಮಗ್ರಿಗಳ ಅಥವಾ ಅದರ ಭಾಗದ ಮೌಲ್ಯದಲ್ಲಿ ಉಂಟಾಗುವ ಯಾವುದೇ ಹೆಚ್ಚಳವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ- IV
## ಸಂಕೀರ್ಣ

**16. ಡೆಪ್ಯೂಟಿ ಕಮಿಷನರನ ತೀರ್ಮಾನವೇ ಅಂತಿಮವಾಗಿರುವುದು ಮತ್ತು ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ಅವನ ವಿರುದ್ಧ ಯಾವುದೇ ದಾವೆಗೆ ಅವಕಾಶವಿಲ್ಲದಿರುವುದು.-** ಈ ಅಧಿನಿಯಮದ ಮೇರೆಗೆ ಡೆಪ್ಯೂಟಿ ಕಮಿಷನರನು ಕೈಗೊಂಡ ಯಾವುದೇ ತೀರ್ಮಾನವನ್ನು ಅಥವಾ ಮಾಡಿದ ಯಾವುದೇ ಕಾರ್ಯವನ್ನು ಯಾವುದೇ ಸಿವಿಲ್ ನ್ಯಾಯಾಲಯವು ಪ್ರಶ್ನಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯಕ್ಕಾಗಿ ಅವನ ವಿರುದ್ಧ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**17. ಡೆಪ್ಯೂಟಿ ಕಮಿಷನರನು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವುದು.-** ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ಮಾಡುವ ಡೆಪ್ಯೂಟಿ ಕಮಿಷನರನು ದಾವೆಗಳ ಅಧಿವಿಚಾರಣೆಗಾಗಿ ಸಿವಿಲ್ ನ್ಯಾಯಾಲಯಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ V)ರ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಬಹುದು.

**18. ನೋಟೀಸು ಕೊಡಲು ತಪ್ಪುವುದು, ಇತ್ಯಾದಿಗಳಿಗಾಗಿ ನಿಕ್ಷೇಪವನ್ನು ಕಂಡವನಿಗೆ ದಂಡ ವಿಧಿಸುವುದು.-** (1) ಯಾವುದೇ ನಿಕ್ಷೇಪವನ್ನು ಕಂಡವನು ಆ ಬಗ್ಗೆ ನೋಟೀಸನ್ನು ಕೊಡಲು ತಪ್ಪಿದರೆ ಅಥವಾ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಠೇವಣಿ ಇಡದಿದ್ದರೆ ಅಥವಾ ಭದ್ರತೆಯನ್ನು ಒದಗಿಸದಿದ್ದರೆ ನಿಕ್ಷೇಪದ ಗುರುತನ್ನು ಮರೆಮಾಚುವ ಹಾಗೆ ಅದನ್ನು ಬದಲಾಯಿಸಿದರೆ ಅಥವಾ ಬದಲಾಯಿಸಲು ಪ್ರಯತ್ನಿಸಿದರೆ, ಅವನು ಅನ್ಯಥಾ ಹಕ್ಕುದಾರನಾಗಬಹುದಾಗಿದ್ದ ನಿಕ್ಷೇಪದ ಪಾಲು ಅಥವಾ ಅದಕ್ಕೆ ಬದಲಾಗಿ ಇಟ್ಟಿರುವ ಹಣದ ಮೊತ್ತವು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ತರುವಾಯ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾವುದೇ ನಿಕ್ಷೇಪವು ಕಂಡುಬಂದ ಸ್ಥಳದ ಒಡೆಯನು ಅಥವಾ ಅಧಿಭೋಗದಾರನು ನಿಕ್ಷೇಪವು ಕಂಡುಬಂದ ಬಗ್ಗೆ ಅರಿವಿದ್ದು, 3ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ನೋಟೀಸನ್ನು ಕೊಡಲು ತಪ್ಪಿದರೆ, ಅಪರಾಧ ನಿರ್ಣಯವಾದ ತರುವಾಯ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**19. 18ನೇ ಪ್ರಕರಣದ ಮೇರೆಗೆ ಅಪರಾಧಗಳನ್ನು ಎಸಗಲು ದುಷ್ಪ್ರೇರಿಸುವ ಒಡೆಯನಿಗೆ ದಂಡ ವಿಧಿಸುವುದು.-** ಯಾವುದೇ ನಿಕ್ಷೇಪವು ಕಂಡುಬಂದ ಸ್ಥಳದ ಒಡೆಯನು ಭಾರತ ದಂಡ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧವನ್ನು ಎಸಗಲು ದುಷ್ಪ್ರೇರಿಸಿದರೆ, ಅವನು ಅನ್ಯಥಾ ಹಕ್ಕುದಾರನಾಗಬಹುದಾದಂಥ ನಿಕ್ಷೇಪದ ಪಾಲು ಅಥವಾ ಅದಕ್ಕೆ ಬದಲಾಗಿ ಇಟ್ಟಿರುವ ಹಣವು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ತರುವಾಯ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**20. ನಿಯಮ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಎಲ್ಲಾ ಉದ್ದೇಶಗಳನ್ನು ಅಥವಾ ಅವುಗಳಲ್ಲಿ ಯಾವುದೇ ಉದ್ದೇಶವನ್ನು ಈಡೇರಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**21. ನಿರಸನ ಮತ್ತು ಉಳಿಸುವಿಕೆಗಳು.-** [1][ಬೆಳಗಾಂ ಪ್ರದೇಶ][1], [1][ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶ][1] ಮತ್ತು ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವ, ಭಾರತ ನಿಕ್ಷೇಪ ನಿಧಿ ಅಧಿನಿಯಮ, 1878 (1878ರ ಕೇಂದ್ರ ಅಧಿನಿಯಮ- VI) ಇದನ್ನು- ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವ ಮೈಸೂರು ನಿಕ್ಷೇಪ ನಿಧಿ ಅಧಿನಿಯಮ, 1910 (1910ರ ಮೈಸೂರು ಅಧಿನಿಯಮ-III) ಇದನ್ನು ಮತ್ತು [1][ಗುಲ್ಬರ್ಗಾ ಪ್ರದೇಶ][1] ದಲ್ಲಿ ಜಾರಿಯಲ್ಲಿರುವ ಹೈದರಾಬಾದ್ ನಿಕ್ಷೇಪ ನಿಧಿ ಅಧಿನಿಯಮ, 1322 ಫಸಲಿ (1322ರ ಫಸಲಿಯ ಹೈದರಾಬಾದ್ ಅಧಿನಿಯಮ III) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ [1][ಕರ್ನಾಟಕ][1] ಅಧಿನಿಯಮ-III) ಇದರ 6ನೇ ಪ್ರಕರಣವು ಸದರಿ ಅಧಿನಿಯಮಿತಿಗಳ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಸದರಿ ಅಧಿನಿಯಮಿತಿಗಳು ಈ ಅಧಿನಿಯಮದ ಮೂಲಕ ನಿರಸನಗೊಂಡಿದ್ದಿದ್ದರೆ ಮತ್ತು ಪುನಃ ಅಧಿನಿಯಮಿತವಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿನಾಂಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**ಕರ್ನಾಟಕ ನಿಕ್ಷೇಪ ನಿಧಿ ನಿಯಮಗಳು, 1963**
**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**


1. ಹೆಸರು
2. ಪರಿಭಾಷೆಗಳು
3. ನಿಯಮಿಸಲಾದ ಅಧಿಕಾರಿ
4. [ಬಿಟ್ಟುಬಿಡಲಾಗಿದೆ]
5. 4ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸುವ ರೀತಿ
6. ನಿಕ್ಷೇಪನಿಧಿ ಅಧಿಕಾರಿಯ ಮತ್ತು ನಿರ್ದೇಶಕರ ವರದಿ
7. ಸ್ವಾಧೀನಪಡಿಸಿಕೊಳ್ಳುವ ಮುನ್ನ ಡೆಪ್ಯೂಟಿ ಕಮಿಷನರನು ಅನುಸರಿಸಬೇಕಾದ ಕಾರ್ಯವಿಧಾನ
8. ನಿಕ್ಷೇಪವನ್ನು ಸ್ವಾಧೀನಪಡಿಸಿಕೊಳ್ಳುವುದು
9. ನಿಕ್ಷೇಪದ ಹಂಚಿಕೆ
10. ಮಾರಾಟ
11. ಬೆಲೆ
12. ಖರೀದಿ
13. ನಿಕ್ಷೇಪಗಳ ಬಗ್ಗೆ ಸರ್ಕಾರದ ಕ್ಲೇಮುಗಳು
14. ವರದಿಗಳು

**ಅಧಿಸೂಚನೆ ಸಂಖ್ಯೆ ಆರ್‌ಡಿಎಫ್ 2, ಟಿಟಿಟಿ 62, ಬೆಂಗಳೂರು,**

ದಿನಾಂಕ 27ನೇ ಜೂನ್, 1963

## ಕರ್ನಾಟಕ ನಿಕ್ಷೇಪ ನಿಧಿ ನಿಯಮಗಳು, 1963

ಕರ್ನಾಟಕ ನಿಕ್ಷೇಪ ನಿಧಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 23)ರ 20ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**1. ಹೆಸರು.**- ಈ ನಿಯಮಗಳನ್ನು ಕರ್ನಾಟಕ ನಿಕ್ಷೇಪ ನಿಧಿ ನಿಯಮಗಳು, 1963 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.**- ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ ಕರ್ನಾಟಕ ನಿಕ್ಷೇಪ ನಿಧಿ ಅಧಿನಿಯಮ, 1962;

(ಬಿ) "ಪ್ರಕರಣ" ಎಂದರೆ ಈ ಅಧಿನಿಯಮದ ಪ್ರಕರಣ;

[1][(ಸಿ) "ನಿಕ್ಷೇಪ ನಿಧಿ ಅಧಿಕಾರಿ" ಎಂದರೆ ವಿಭಾಗಾಧಿಕಾರಿ, ಬೆಂಗಳೂರು ವಿಭಾಗ.][1]

1. ಅಧಿಸೂಚನೆ ಸಂಖ್ಯೆ ಆರ್‌ಡಿ 23, ಇಟಿಸಿ 68, ದಿನಾಂಕ 29ನೇ ಏಪ್ರಿಲ್ 1969ರ ಮೂಲಕ 29ನೇ ಏಪ್ರಿಲ್, 1969 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**3. ನಿಯಮಿಸಲಾದ ಅಧಿಕಾರಿ.**- ನಿಕ್ಷೇಪ ನಿಧಿ ಅಧಿಕಾರಿಯು ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಯಮಿಸಲಾದ ಅಧಿಕಾರಿಯಾಗಿರತಕ್ಕದ್ದು.

**[1][4. * * * * *][1]**

1. ಅಧಿಸೂಚನೆ ಸಂಖ್ಯೆ. ಆರ್‌ಡಿ 24 ಇಟಿಸಿ 65 (ಜಿಎಸ್‌ಆರ್ 1191)ರ ಮೂಲಕ ದಿನಾಂಕ 4ನೇ ಅಕ್ಟೋಬರ್, 1966 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**5. 4ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸುವ ರೀತಿ.**- [1][(1) ಡೆಪ್ಯೂಟಿ ಕಮಿಷನರನು, 3ನೇ ಪ್ರಕರಣದ ಮೇರೆಗೆ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ, 4ನೇ ಪ್ರಕರಣದ (ಬಿ) ಖಂಡದ ಅನುಸಾರವಾಗಿ ರಾಜಪತ್ರದಲ್ಲಿ ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಅಧಿಸೂಚನೆಯನ್ನು ಪ್ರಕಟಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಧಿಸೂಚನೆಯನ್ನು ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಸಹ ಪ್ರಕಟಿಸತಕ್ಕದ್ದು, ಎಂದರೆ.-

(ಎ) ಅಧಿಕಾರ ವ್ಯಾಪ್ತಿ ಹೊಂದಿರುವ ಸ್ಥಳೀಯ ಪೊಲೀಸ್ ಠಾಣೆ;

(ಬಿ) ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯ ಸೂಚನಾ ಫಲಕ;

(ಸಿ) ನಿಕ್ಷೇಪ ನಿಧಿಯು ಕಂಡುಬಂದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ತಾಲ್ಲೂಕಿನ ತಹಶೀಲ್ದಾರರ ಕಚೇರಿಯ ಸೂಚನಾ ಫಲಕ;

(ಡಿ) ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಚೇರಿ; ಮತ್ತು

(ಇ) ನಿಕ್ಷೇಪ ನಿಧಿಯು ಕಂಡುಬಂದ ಗ್ರಾಮದ ಚಾವಡಿ.

(3) ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಅದನ್ನು ಡೆಪ್ಯೂಟಿ ಕಮಿಷನರನು 4ನೇ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯ ಮೇಲೆ ಮತ್ತು ನಿಕ್ಷೇಪವನ್ನು ಕಂಡ ವ್ಯಕ್ತಿಯ ಮೇಲೆ ಜಾರಿ ಮಾಡತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ. ಆರ್‌ಡಿ 24 ಇಟಿಸಿ 65 (ಜಿಎಸ್‌ಆರ್ 1191)ರ ಮೂಲಕ ದಿನಾಂಕ 4ನೇ ಅಕ್ಟೋಬರ್, 1966 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**6. ನಿಕ್ಷೇಪ ನಿಧಿ ಅಧಿಕಾರಿಯ ಮತ್ತು ನಿರ್ದೇಶಕನ ವರದಿ.**- ಡೆಪ್ಯೂಟಿ ಕಮಿಷನರನಿಂದ ಅಂಥ ಮಾಹಿತಿಯನ್ನು ಸ್ವೀಕರಿಸಿದ ಅರವತ್ತು ದಿನಗಳ ಒಳಗಾಗಿ, ನಿಕ್ಷೇಪ ನಿಧಿ ಅಧಿಕಾರಿ ಮತ್ತು ನಿರ್ದೇಶಕನು, ನಿಕ್ಷೇಪದ ಪರಿಶೀಲನೆಗಾಗಿ ವ್ಯವಸ್ಥೆ ಮಾಡತಕ್ಕದ್ದು ಮತ್ತು ನಿಕ್ಷೇಪ ಅಥವಾ ಅದರ ಯಾವುದೇ ಭಾಗವನ್ನು ರಾಜ್ಯ ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕೇ ಎಂಬ ಬಗ್ಗೆ ಡೆಪ್ಯೂಟಿ ಕಮಿಷನರನಿಗೆ ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ತಮ್ಮ ವರದಿಯನ್ನು ಸಲ್ಲಿಸತಕ್ಕದ್ದು.

**7. ಸ್ವಾಧೀನಪಡಿಸಿಕೊಳ್ಳುವ ಮುನ್ನ ಡೆಪ್ಯೂಟಿ ಕಮಿಷನರನು ಅನುಸರಿಸಬೇಕಾದ ಕಾರ್ಯವಿಧಾನ.**- (1) ಡೆಪ್ಯೂಟಿ ಕಮಿಷನರನು, ಯಾವುದೇ ನಿಕ್ಷೇಪವು ಒಡೆಯನಿಲ್ಲದ ನಿಕ್ಷೇಪವೆಂದು 8ನೇ ಪ್ರಕರಣದ ಮೇರೆಗೆ

ಘೋಷಿಸಿರುವಾಗ ಮತ್ತು 10 ರಿಂದ 14ರ ವರೆಗಿನ ಪ್ರಕರಣಗಳಲ್ಲಿ ಹೇಳಲಾದ ರೀತಿಯಲ್ಲಿ ನಿಕ್ಷೇಪವನ್ನು ವಶಾವಣೆ ಮಾಡುವುದಕ್ಕೆ ಅಥವಾ ಹಂಚುವುದಕ್ಕೆ ಮುಂಚೆ, ಅಂಥ ನಿಕ್ಷೇಪವನ್ನು ಅಥವಾ ಅದರ ಯಾವುದೇ ಭಾಗವನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ದೇಶಕನು ಬಯಸುವನೇ ಎಂಬುದನ್ನು ತಿಳಿದುಕೊಳ್ಳಲು ನಿರ್ದೇಶಕನೊಂದಿಗೆ ಸಮಾಲೋಚಿಸತಕ್ಕದ್ದು. ಹಾಗೆ ಉಲ್ಲೇಖ ಮಾಡುವಾಗ ಹುದುಗಿಸಿಟ್ಟ ನಿಧಿಯೆಂದು ಶೋಧಿಸಿದ ಪ್ರಾಚೀನ ನಾಣ್ಯಗಳು ಮತ್ತು ಪುರಾತತ್ವ ಆಸಕ್ತಿಯುಳ್ಳ ಇತರ ವಸ್ತುಗಳನ್ನು ಹಾಗೂ ಅವುಗಳಲ್ಲಿ ಯಾವ ವಸ್ತುಗಳು ಐತಿಹಾಸಿಕ ಅಥವಾ ಪುರಾತತ್ವದ ಮಹತ್ವವುಳ್ಳವುಗಳೆಂದು ಸಾಬೀತಾಗುವ ಸಂಭವವಿದೆಯೆಂದು ಸೂಚಿಸಿ ಒಂದು ಸವಿಸ್ತರ ಪಟ್ಟಿಯನ್ನು ಡೆಪ್ಯೂಟಿ ಕಮಿಷನರನು ಪರೀಕ್ಷೆಗಾಗಿ ಕಳುಹಿಸತಕ್ಕದ್ದು.

(2) ನಿರ್ದೇಶಕನು, ಆ ನಿಕ್ಷೇಪವನ್ನು ಪರೀಕ್ಷಿಸಿ ಅಧೀಕ್ಷಕ, ಸರ್ಕಾರಿ ವಸ್ತು ಸಂಗ್ರಹಾಲಯ, ಬೆಂಗಳೂರು-ಇವರೊಡನೆ ಸಮಾಲೋಚಿಸಿದ ತರುವಾಯ ತನ್ನ ಕಚೇರಿಯಲ್ಲಿ ನಿಕ್ಷೇಪವನ್ನು ಸ್ವೀಕರಿಸಿದ ದಿನದಿಂದ ಒಂದು ತಿಂಗಳೊಳಗಾಗಿ ಅದಕ್ಕೆ ಸಂಬಂಧಿಸಿದಂತೆ ನಿಯಮಿಸಲಾದ ವ್ಯವಹರಣೆಗಳನ್ನು ಕೈಗೊಳ್ಳುವುದಕ್ಕಾಗಿ ಅದನ್ನು ಡೆಪ್ಯೂಟಿ ಕಮಿಷನರನಿಗೆ ಹಿಂತಿರುಗಿಸತಕ್ಕದ್ದು.

(3) ನಿರ್ದೇಶಕನು, ಅಂಥ ಪರೀಕ್ಷೆಯ ತರುವಾಯ, ಆ ಎಲ್ಲ ನಾಣ್ಯಗಳು ಅಥವಾ ಇತರ ವಸ್ತುಗಳು ಅಥವಾ ಆ ಪೈಕಿ ಯಾವುದೇ ನಾಣ್ಯ ಅಥವಾ ವಸ್ತುವು ಅಪರೂಪದ ಬಗೆಯವು ಅಥವಾ ಪುರಾತತ್ವ ಆಸಕ್ತಿಯವು ಆಗಿದ್ದು ತನ್ನ ಕಚೇರಿಯ ಕಪಾಟಿನಲ್ಲಿ ಅಥವಾ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲು ಅರ್ಹವಾಗಿವೆ ಎಂದು ಪರಿಗಣಿಸಿದರೆ, ಅಂಥ ನಾಣ್ಯಗಳು ಅಥವಾ ವಸ್ತುಗಳನ್ನು ಸರ್ಕಾರದ ಪರವಾಗಿ ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡತಕ್ಕದ್ದು.

(4) ಆ ನಾಣ್ಯಗಳು ಅಥವಾ ಇತರ ವಸ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಶಿಫಾರಸ್ಸು ಮಾಡುವಾಗ, ಆ ವಸ್ತುಗಳ ಅಂದಾಜು ಮೌಲ್ಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಸಂರಕ್ಷಿಸಿಡಲು ಅರ್ಹವಾದುದೆಂದು ತಾನು ಪರಿಗಣಿಸಬಹುದಾದಂಥ ನಾಣ್ಯ ಅಥವಾ ವಸ್ತುಗಳ ಪಟ್ಟಿಯೊಂದನ್ನು (ಮಾದರಿಗಳೊಂದಿಗೆ) ಸಲ್ಲಿಸತಕ್ಕದ್ದು.

**8. ನಿಕ್ಷೇಪವನ್ನು ಸ್ವಾಧೀನಪಡಿಸಿಕೊಳ್ಳುವುದು.-** (1) ಡೆಪ್ಯೂಟಿ ಕಮಿಷನರನು, ಯಾವುದೇ ನಿಕ್ಷೇಪ ಅಥವಾ ಅದರ ಯಾವುದೇ ಭಾಗವನ್ನು ರಾಜ್ಯ ಸರ್ಕಾರದ ಪರವಾಗಿ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಅಥವಾ ಸ್ವಾಧೀನಪಡಿಸಿಕೊಳ್ಳುವ ತನ್ನ ಉದ್ದೇಶವನ್ನು 15ನೇ ಪ್ರಕರಣದ ಮೇರೆಗೆ ಘೋಷಿಸುವುದಕ್ಕೆ ಮುನ್ನ ರಾಜ್ಯ ಸರ್ಕಾರದ ಆದೇಶವನ್ನು ಪಡೆದುಕೊಳ್ಳತಕ್ಕದ್ದು.

(2) ರಾಜ್ಯ ಸರ್ಕಾರವು, ನಿಕ್ಷೇಪ ನಿಧಿ ಅಧಿಕಾರಿಯ ವರದಿಯ ಮೇಲೆ ಅಥವಾ ಅನ್ಯಥಾ ಅಂಥ ನಿಕ್ಷೇಪ ಅಥವಾ ಅದರ ಯಾವುದೇ ಭಾಗವನ್ನು ಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಿದರೆ, ಹಾಗೆಂದು ರಾಜ್ಯ ಸರ್ಕಾರವು ಅದನ್ನು ಡೆಪ್ಯೂಟಿ ಕಮಿಷನರನಿಗೆ ತಿಳಿಸತಕ್ಕದ್ದು ಮತ್ತು ಅವನು 8ನೇ ಪ್ರಕರಣದ ಮೇರೆಗೆ ಘೋಷಣೆ ಮಾಡಿದ ಮತ್ತು 15ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಿದ ತರುವಾಯ ಹಾಗೆ ಸ್ವಾಧೀನಪಡಿಸಿಕೊಳ್ಳಲಾದ ನಿಕ್ಷೇಪ ಅಥವಾ ಅದರ ಯಾವುದೇ ಭಾಗವನ್ನು ಆದಷ್ಟು ಬೇಗನೆ ನಿಕ್ಷೇಪ ನಿಧಿ ಅಧಿಕಾರಿಗೆ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದ ಯಾವುದೇ ಇತರ ಕೇಂದ್ರಕ್ಕೆ ಕಳುಹಿಸತಕ್ಕದ್ದು.

**9. ನಿಕ್ಷೇಪದ ಹಂಚಿಕೆ.-** (1) ರಾಜ್ಯ ಸರ್ಕಾರವು, ನಿಕ್ಷೇಪವನ್ನು ಅಥವಾ ಅದರ ಯಾವುದೇ ಭಾಗವನ್ನು ಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಿದ ಸಂದರ್ಭದಲ್ಲಿ, ನಿಕ್ಷೇಪ ನಿಧಿ ಅಧಿಕಾರಿಯು, ವಸ್ತು ಸಂಗ್ರಹಾಲಯ ಮತ್ತು ಸಂಸ್ಥೆಗಳಿಗೆ ಈ ಮುಂದಿನ ಆದ್ಯತೆಗಳ ಮೇರೆಗೆ ಅದನ್ನು ವಿತರಿಸಲು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡತಕ್ಕದ್ದು.

(ಎ) ನಿಕ್ಷೇಪ ನಿಧಿಯು ಕಂಡುಬಂದ ರಾಜ್ಯದ ಪ್ರಧಾನ ವಸ್ತು ಸಂಗ್ರಹಾಲಯ ಮತ್ತು ರಾಷ್ಟ್ರೀಯ ವಸ್ತು ಸಂಗ್ರಹಾಲಯದ ನಿಕ್ಷೇಪ ನಿಧಿ ಅಧಿಕಾರಿಯು ರಾಜ್ಯ ವಸ್ತು ಸಂಗ್ರಹಾಲಯಕ್ಕೆ ಹಂಚಿಕೆ ಮಾಡಬೇಕೆಂದು ಶಿಫಾರಸ್ಸು ಮಾಡುವಾಗ, ರಾಷ್ಟ್ರೀಯ ವಸ್ತು ಸಂಗ್ರಹಾಲಯಕ್ಕೆ ಕೊಡಬೇಕಾದ ವಸ್ತುಗಳು ರಾಷ್ಟ್ರೀಯ ಮಹತ್ವ ಹೊಂದಿದವುಗಳಾಗಿವೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು;

(ಬಿ) ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳೂ ಸೇರಿದಂತೆ ರಾಜ್ಯ ಸರ್ಕಾರವು ಅಥವಾ ಇತರ ಸಾರ್ವಜನಿಕ ಪ್ರಾಧಿಕಾರಗಳು ನಿರ್ವಹಿಸುತ್ತಿರುವ ರಾಜ್ಯದಲ್ಲಿನ ಇತರ ವಸ್ತು ಸಂಗ್ರಹಾಲಯಗಳು;

(ಸಿ) ಇತರೆ ರಾಜ್ಯಗಳ ಪ್ರಧಾನ ರಾಜ್ಯ ವಸ್ತು ಸಂಗ್ರಹಾಲಯಗಳು ಮತ್ತು ಕಲ್ಕತ್ತಾದ ಭಾರತೀಯ ವಸ್ತು ಸಂಗ್ರಹಾಲಯ;

(ಡಿ) ವಿಶ್ವವಿದ್ಯಾಲಯಗಳೂ ಸೇರಿದಂತೆ ರಾಜ್ಯ ಸರ್ಕಾರಗಳು ಅಥವಾ ಇತರ ಸಾರ್ವಜನಿಕ ಪ್ರಾಧಿಕಾರಗಳು ನಿರ್ವಹಿಸುತ್ತಿರುವ ಇತರ ರಾಜ್ಯಗಳ ಇತರ ವಸ್ತು ಸಂಗ್ರಹಾಲಯಗಳು;

(ಇ) ಇತರ ವಸ್ತು ಸಂಗ್ರಹಾಲಯಗಳು.

(2) ನಿರ್ದೇಶಕನು, ಭಾರತದ ಪುರಾತತ್ವ ಇಲಾಖೆಯ ಮಹಾನಿರ್ದೇಶಕನಿಗೆ ರವಾನಿಸುವ ಸಲುವಾಗಿ ಭೂಮಿಯಿಂದ ಹೊರ ತೆಗೆದ ನಾಣ್ಯಗಳ ಸಂಕ್ಷಿಪ್ತ ವಿವರಣೆಯನ್ನು ಕೊಡುವ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಭಾರತದ ಪುರಾತತ್ವ ಇಲಾಖೆಯ ಮಹಾ ನಿರ್ದೇಶಕನು ಅಗತ್ಯಪಡಿಸಿದರೆ ಮತ್ತು ನಾಣ್ಯಗಳು ಲಭ್ಯವಿದ್ದರೆ ಆ ವಸ್ತು ಸಂಗ್ರಹಾಲಯಕ್ಕೆ ಮತ್ತು ಭಾರತದಲ್ಲಿನ ಇತರೆ ಸಂಸ್ಥೆಗಳಿಗೆ ಅವುಗಳನ್ನು ಒದಗಿಸತಕ್ಕದ್ದು.

**10. ಮಾರಾಟ.**- (1) ಸ್ವಾಧೀನಪಡಿಸಿಕೊಂಡ ಯಾವುದೇ ನಿಕ್ಷೇಪದ ಒಂದು ಭಾಗವು ನಾಣ್ಯಗಳಾಗಿದ್ದರೆ, ಅಂಥ ನಿಕ್ಷೇಪದ ಸಂಬಂಧದಲ್ಲಿ ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು, ಎಂದರೆ,-

(i) ಒಂದೇ ಒಂದು ಮಾದರಿ ನಾಣ್ಯವನ್ನು ಸ್ವಾಧೀನಪಡಿಸಿಕೊಂಡಿದ್ದು ಆ ಮಾದರಿ ನಾಣ್ಯವು ಸರ್ಕಾರಿ ವಸ್ತು ಸಂಗ್ರಹಾಲಯ, ಬೆಂಗಳೂರು-ಇಲ್ಲಿ ಇಲ್ಲದಿದ್ದರೆ ಅದನ್ನು ಸಂರಕ್ಷಿಸಿಡುವ ಸಲುವಾಗಿ, ಆ ವಸ್ತು ಸಂಗ್ರಹಾಲಯದ ಅಧೀಕ್ಷಕನಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಅಂಥ ಮಾದರಿ ನಾಣ್ಯವು ಈಗಾಗಲೇ ಅಲ್ಲಿ ಇದ್ದ ಸಂದರ್ಭದಲ್ಲಿ, ಅದನ್ನು ನಿರ್ದೇಶಕನು ತನ್ನ ಕಪಾಟಿನಲ್ಲಿ ಇಟ್ಟುಕೊಳ್ಳತಕ್ಕದ್ದು;

(ii) ಒಂದೇ ಬಗೆಯ ಒಂದಕ್ಕಿಂತ ಹೆಚ್ಚು ನಾಣ್ಯಗಳನ್ನು ಸ್ವಾಧೀನ ಪಡಿಸಿಕೊಂಡಿದ್ದರೆ, ನಿರ್ದೇಶಕನು, ಒಂದು ಮಾದರಿ ನಾಣ್ಯವನ್ನು ತನ್ನ ಕಪಾಟಿನಲ್ಲಿ ಇಟ್ಟುಕೊಂಡು, ಇನ್ನುಳಿದ ನಾಣ್ಯಗಳನ್ನು ಅಧೀಕ್ಷಕರು, ಸರ್ಕಾರೀ ವಸ್ತು ಸಂಗ್ರಹಾಲಯ, ಬೆಂಗಳೂರು- ಇವರಿಗೆ ಕಳುಹಿಸತಕ್ಕದ್ದು. ಆ ಅಧೀಕ್ಷಕನು, ಒಂದು ಮಾದರಿ ನಾಣ್ಯವನ್ನು ವಸ್ತು ಸಂಗ್ರಹಾಲಯದಲ್ಲಿ ಇಟ್ಟುಕೊಳ್ಳತಕ್ಕದ್ದು ಮತ್ತು ಇನ್ನುಳಿದವುಗಳನ್ನು (2)ನೇ ಉಪ-ನಿಯಮಗಳಲ್ಲಿ ಹೇಳಲಾದ ವಿಧಾನಗಳನ್ನು ಅನುಸರಿಸಿ ಮಾರಾಟಕ್ಕೆ ಇಡತಕ್ಕದ್ದು. ತಮ್ಮ ಹೆಸರುಗಳನ್ನು ನೋಂದಾಯಿಸಿರಬಹುದಾದಂಥ ನಾಣ್ಯಶಾಸ್ತ್ರಜ್ಞರಿಗೆ ಮತ್ತು ಅಂಥ ನಾಣ್ಯಗಳನ್ನು ಪಡೆದುಕೊಳ್ಳಲು ನಿರತವಾದ ವಸ್ತು ಸಂಗ್ರಹಾಲಯಗಳಿಗೆ ಮತ್ತು ಸಂಘಗಳಿಗೆ, 11ನೇ ನಿಯಮದ ಅಡಿಯಲ್ಲಿ ಮಾರಾಟಕ್ಕಾಗಿ ಅಧಿಸೂಚಿಸಲಾದ ಬೆಲೆಗಿಂತ ಕಡಿಮೆಯಲ್ಲದ ಬೆಲೆಗೆ ಮಾರಾಟ ಮಾಡಲು ಅಂಥ ನಾಣ್ಯಗಳ ಒಂದು ಪಟ್ಟಿಯನ್ನು ಸಹ ಒದಗಿಸತಕ್ಕದ್ದು.

(2) ರಾಜ್ಯ ಸರ್ಕಾರವು, 9ನೇ ನಿಯಮದಲ್ಲಿ ನಮೂದಿಸಲಾದ ವಸ್ತು ಸಂಗ್ರಹಾಲಯಗಳ ಮತ್ತು ಸಂಸ್ಥೆಗಳ ಅಗತ್ಯತೆಯನ್ನು ನಿರ್ಧರಿಸಿದ ತರುವಾಯ, ನಿಕ್ಷೇಪ ನಿಧಿ ಅಧಿಕಾರಿ ಮತ್ತು ಅಧೀಕ್ಷಕ, ಸರ್ಕಾರಿ ವಸ್ತು ಸಂಗ್ರಹಾಲಯ, ಬೆಂಗಳೂರು- ಇವರೊಡನೆ ಸಮಾಲೋಚಿಸಿ, 8ನೇ ನಿಯಮದ ಅಡಿಯಲ್ಲಿ ಸ್ವಾಧೀನ ಪಡಿಸಿಕೊಂಡಿದ್ದಿರಲಿ ಅಥವಾ ಅನ್ಯಥಾ ಪಡೆದುಕೊಂಡಿದ್ದಿರಲಿ, ಆ ನಿಕ್ಷೇಪದ ಒಂದು ಭಾಗವನ್ನು ತಾನು ಯುಕ್ತವೆಂದು ಭಾವಿಸಿದಂಥ ರೀತಿಯಲ್ಲಿ ಪ್ರಸ್ತಾವಿತ ಮಾರಾಟದ ಬಗ್ಗೆ ಅಧಿಸೂಚನೆ ಹೊರಡಿಸಿದ ತರುವಾಯ ಸಾರ್ವಜನಿಕರ ಸಲುವಾಗಿ ಮಾರಾಟಕ್ಕೆ ಇಡತಕ್ಕದ್ದು:

[1][ಆದಾಗ್ಯೂ, ಯಾವುದೇ ಐತಿಹಾಸಿಕ ಅಥವಾ ಪುರಾತತ್ವದ ಮಹತ್ವ ಇಲ್ಲದ ಚಿನ್ನದ ನಾಣ್ಯಗಳನ್ನು ಮತ್ತು ಇತರ ವಸ್ತುಗಳನ್ನು, ಭಾರತ ಸರ್ಕಾರದ ಟಂಕಸಾಲೆಗೆ ಮಾರಾಟ ಮಾಡಲು ಅಥವಾ ಜಾರಿಯಲ್ಲಿರುವ ನಿಯಮಗಳಿಗನುಸಾರವಾಗಿ ವಿಲೇ ಮಾಡಲು ಖಜಾನೆಗಳ ನಿರ್ದೇಶಕರು, ಬೆಂಗಳೂರು-ಇವರಿಗೆ ಕಳುಹಿಸಿಕೊಡಬಹುದು.][1]

1. ಅಧಿಸೂಚನೆ ಸಂಖ್ಯೆ ಆರ್‌ಡಿಎಫ್ 9 ಟಿಆರ್‌ಐ 75 (ಜಿಎಸ್‌ಆರ್ 209) ದಿನಾಂಕ 14/ 21ನೇ ಜುಲೈ, 1976ರ ಮೂಲಕ 21ನೇ ಜುಲೈ, 1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**11. ಬೆಲೆ.**- ರಾಜ್ಯ ಸರ್ಕಾರವು, ನಿಕ್ಷೇಪ ನಿಧಿ ಅಧಿಕಾರಿ ಮತ್ತು ನಿರ್ದೇಶಕರೊಂದಿಗೆ ಸಮಾಲೋಚಿಸಿದ ತರುವಾಯ, ಮಾರಾಟಕ್ಕಾಗಿ ಅಧಿಸೂಚಿಸಲಾದ ವಸ್ತುಗಳ ಬೆಲೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಅದನ್ನು ಪ್ರಸ್ತಾವಿತ ಮಾರಾಟದ ಉದ್ದೇಶದ ಬಗ್ಗೆ ಅಧಿಸೂಚನೆ ಹೊರಡಿಸಿದ ತರುವಾಯ ಪ್ರತಿಯೊಂದು ಬಾಬಿನ ಮುಂದೆ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಮಾರಾಟದಿಂದ ಬಂದ ಮೊಬಲಗನ್ನು ರಾಜ್ಯ ಸರ್ಕಾರದ ಜಮೆಗಳಿಗೆ ಜಮೆ ಮಾಡತಕ್ಕದ್ದು.

**12. ಖರೀದಿ.**- ಡೆಪ್ಯೂಟಿ ಕಮಿಷನರನು, ಪುರಾತತ್ವ ಇಲಾಖೆಯ ನಿರ್ದೇಶಕರ ಶಿಫಾರಸ್ಸಿನ ಮೇರೆಗೆ, ನಿಕ್ಷೇಪದ ಸ್ವಾಧೀನಕ್ಕೆ ಅನ್ವಯಿಸುವ 15ನೇ ಪ್ರಕರಣದಲ್ಲಿ ಹೇಳಲಾದ ಮೌಲ್ಯದ ಆಧಾರದ ಮೇಲೆ ನಿಕ್ಷೇಪ ಕಂಡವನಿಂದ ಹತ್ತು ರೂಪಾಯಿಗಳಿಗಿಂತ ಕಡಿಮೆ ಮೌಲ್ಯದ ನಾಣ್ಯಗಳನ್ನು ಸರ್ಕಾರಕ್ಕೆ ತಿಳಿಸದೆ ಖರೀದಿ ಮಾಡಬಹುದು. ಅಂಥ ನಾಣ್ಯಗಳು, ಸ್ವಾಧೀನಪಡಿಸಿಕೊಂಡ ನಾಣ್ಯಗಳಾಗಿದ್ದರೆ ಹೇಗೋ ಹಾಗೆ 10ನೇ ನಿಯಮದ (1)ನೇ ಉಪ ನಿಯಮದ ಅನುಸಾರವಾಗಿ ಅವುಗಳನ್ನು ವಿಲೇ ಮಾಡಲು ಡೆಪ್ಯೂಟಿ ಕಮಿಷನರನು ಪುರಾತತ್ವ ಇಲಾಖೆಯ ನಿರ್ದೇಶಕನಿಗೆ ಕಳುಹಿಸಿಕೊಡತಕ್ಕದ್ದು.

**13. ನಿಕ್ಷೇಪಗಳ ಬಗ್ಗೆ ಸರ್ಕಾರದ ಕ್ಲೇಮುಗಳು.**- ಆ ಜಿಲ್ಲೆಯ ಜಿಲ್ಲಾಧಿಕಾರಿಯು, ಈ ಅಧಿನಿಯಮವು ಅನ್ವಯಿಸುವಂಥ ಮತ್ತು ಅಂಥ ಶೋಧನೆಗಳ ಮಾಹಿತಿ ಅವನಿಗೆ ದೊರೆತಾಗ, ಅವನ ಅಧಿಕಾರ ವ್ಯಾಪ್ತಿಯಲ್ಲಿ

ಇದ್ದಂಥ ಬೆಲೆಯುಳ್ಳ ಎಲ್ಲ ತಾಮ್ರದ ತಟ್ಟೆಗಳು, ಶಾಸನಗಳು ಮತ್ತು ಇತರ ನಿಕ್ಷೇಪಗಳ ಬಗ್ಗೆ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರದ ಕ್ಲೇಮುಗಳನ್ನು ಮಂಡಿಸತಕ್ಕದ್ದು.

**14. ವರದಿಗಳು.–** ನಿಕ್ಷೇಪ ನಿಧಿ ಅಧಿಕಾರಿಯು, ಆರ್ಥಿಕ ವರ್ಷದಲ್ಲಿ ಕಂಡುಬಂದ ನಿಕ್ಷೇಪದ ಕ್ರೋಢೀಕೃತ ವರದಿಯೊಂದನ್ನು ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯಕ್ಕೆ ಮತ್ತು ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಗೆ ಕಳುಹಿಸಿಕೊಡತಕ್ಕದ್ದು. ಈ ವರದಿಯು, ಪುನಃಪರಿಶೀಲನೆಯ ವರ್ಷದ ಅವಧಿಯಲ್ಲಿ ಕಂಡುಬಂದ ನಿಕ್ಷೇಪ ನಿಧಿಯ ಪರೀಕ್ಷೆಯ ಫಲಿತಾಂಶಗಳ ಸಾರಾಂಶವನ್ನು ಒಳಗೊಂಡಿರತಕ್ಕದ್ದು. ಇದಲ್ಲದೆ, ಅವು ಯಾವ ಸಾಮಗ್ರಿಯಿಂದ ರಚಿತವಾಗಿವೆಯೋ ಆ ಮೂಲಕ ಮತ್ತು ಅವು ಸರಿಸುಮಾರಾಗಿ ಯಾವ ವರ್ಗಕ್ಕೆ ಸೇರಿವೆಯೋ ಆ ಮೂಲಕ ಮಾಡಲಾದ ವರ್ಗೀಕರಣವನ್ನೂ ಸಹ ಒಳಗೊಂಡಿರತಕ್ಕದ್ದು. ವರದಿಯು, ಪ್ರಸ್ತುತ ವರ್ಷದಲ್ಲಿ ಕಂಡುಬಂದ ಯಾವುದೇ ಮಹತ್ವದ ನಿಕ್ಷೇಪ ನಿಧಿಗಳ ಹಾಗೂ ಅವುಗಳ ವಿತರಣೆಯ ಬಗ್ಗೆ ಒಂದು ಸಂಕ್ಷಿಪ್ತ ನಿರೂಪಣೆಯನ್ನು ಸಹ ಒಳಗೊಂಡಿರತಕ್ಕದ್ದು.

The above translation of the Karnataka Treasure Trove Act, 1962 (Karnataka Act 23 of 1963) and the Karnataka Treasure Trove Rules, 1963 shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

GOVERNER OF KARNATAKA
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.